ing, Machine Tool Technology, Refrigeration and Air conditioning, etc., at diploma level at Government Polytechnics and diversified courses such as. Telecommunication Engineering, Electronics, etc., at degree level in Engineering Colleges, in the IV Plan period.

ಶ್ರೀ ಬಿ. ಆರ್. ಬದ್ರಿನಾರಾಯಣ್: —ಈ ಶಿಕ್ಷಣವನ್ನು ಬಳ್ಳಾರಿಯಲ್ಲಿ ಪ್ರಾರಂಭ ಮಾಡಿ ಒಂದು ವರ್ಷಕ್ಕೆ ಮೇಲಾಯಿತು. ಇದರಿಂದ ಬಂದ ಅನುಭವ ಏನು?

† ಶ್ರೀ ಎನ್. ಎಂ. ಕೊಟ್ರಬಸಯ್ಯ ಸೋಗಿ:—ಒಂದು ವರ್ಷಕ್ಕೆ ಮೇಲ್ಪಟ್ಟಿಲ್ಲ. ಮೊನ್ನೆ ಜೂನ್ ತಿಂಗಳಲ್ಲಿ ಪ್ರಾರಂಭವಾಗಿದೆ. ಮೊನ್ನೆ ಜೂನ್ ತಿಂಗಳಲ್ಲಿ ಕೇಂದ್ರದ ಶಿಕ್ಷಣ ಮಂತ್ರಿಯವರು ಇದರ ಉದ್ಘಾಟನೆಯನ್ನು ಮಾಡಿದ್ದಾರೆ. ಆದರ ವಿಷಯದಲ್ಲಿ ಸರ್ವೆ ಮಾಡುತ್ತಿದ್ದಾರೆ. ಬೇರೆ ಬೇರೆ ಡಾಟಾ ಕಲೆಕ್ಟ್ ಮಾಡುತ್ತಿದ್ದಾರೆ. ಇದಕ್ಕೋಸ್ಕರ ಕೆಲವು ಸ್ಟಾಫ್ ನೇಮಕ ಮಾಡಿದ್ದೇವೆ. ಈ ವರ್ಷದ ಡಿಸೆಂಬರ್ ತಿಂಗಳೊಳಗೆ ಸಂಬಂಧಪಟ್ಟ ಮಾಹಿತಿಯನ್ನು ಸಂಗ್ರಹಣೆ ಮಾಡಬೇಕೆಂದು ನಿರ್ದೇಶನ ಕೊಟ್ಟಿದ್ದೇವೆ. ಅದರ ನಂತರ ನಿರ್ದಿಷ್ಟವಾದ ಕಾರ್ಯಕ್ರಮವನ್ನು ತೆಗೆದುಕೊಳ್ಳುತ್ತೇವೆ.

ಶ್ರೀ ಎ. ಆರ್. ಬದ್ರಿನಾರಾಯಣ್:—ಡೈವರ್ಸಿಫಿಕೇಶನ್ ಕೋರ್ಸು ಇನ್ ಟೆಕ್ನಿಕಲ್ ಎಜುಕೇಶನ್ ಪ್ರಾರಂಭ ಮಾಡುತ್ತೇವೆಂದು ಹೇಳಿದ್ದೀರಿ. ಈಗ ಅದನ್ನು ಎಲ್ಲೆಲ್ಲಿ ಪ್ರಾರಂಭ ಮಾಡಲಾಗಿದೆ?

ಶ್ರೀ ಎನ್. ಎಂ. ಕೊಟ್ರಬಸಯ್ಯ ಸೋಗಿ:—ಈಗಾಗಲೇ ಅದನ್ನು ಅನೇಕ ಕಾಲೇಜುಗಳಲ್ಲಿ ಪ್ರಾರಂಭ ಮಾಡಲಾಗಿದೆ. ಅದರ ವಿವರ ಹೇಳುತ್ತೇನೆ. ದಾವಣಗೆರೆ ಇಂಜಿನಿಯರಿಂಗ್ ಕಾಲೇಜು, ನ್ಯಾಷನಲ್ ಇನ್‌ಸ್ಟಿಟ್ಯೂಟ್ ಆಫ್ ಇಂಜಿನಿಯರಿಂಗ್, ಮೈಸೂರು, ಮಲ್ನಾಡ್ ಇಂಜಿನಿಯರಿಂಗ್ ಕಾಲೇಜು, ಹಾಸನ ಪಿ. ಎಸ್. ಇಂಜಿನಿಯರಿಂಗ್ ಕಾಲೇಜು, ಮಂಡ್ಯ, ಗುಲ್ಬರ್ಗ ಇಂಜಿನಿಯರಿಂಗ್ ಕಾಲೇಜು, ಪಾಲಿಟೆಕ್ನಿಕ್ ಫಾರ್ ವಿಮೆನ್, ಬೆಂಗಳೂರು, ಪಾಲಿಟೆಕ್ನಿಕ್, ಬಳ್ಳಾರಿ ಪಾಲಿಟೆಕ್ನಿಕ್, ಗುಲ್ಬರ್ಗ ಮುಂತಾದ ಕಡೆಗಳಲ್ಲಿ ಡೈವರ್ಸಿಫೈಡ್ ಕೋರ್ಸುಪ್ರಾರಂಭ ಮಾಡಿದ್ದೇವೆ.

2-00 P. M.

ಶ್ರೀ ಎಚ್. ಬಿ. ಜ್ವಾಲನಯ್ಯ:—ಈಗ ಎಲ್ಲೆಲ್ಲಿ ಎಲೆಕ್ಟ್ರಿಕಲ್, ಸಿವಿಲ್, ಮೆಕ್ಯಾನಿಕಲ್ ಇಂಜಿನಿಯರಿಂಗ್ ಕೋರ್ಸ್‌ಗಳು ಇವೆಯೋ ಅಂಥಾ ಕಡೆಗಳಲ್ಲಿ ಈ ಡೈವರ್ಸಿಫಿಕೇಶನ್ ಕೋರ್ಸ್ ಇನ್ ಟೆಕ್ನಿಕಲ್ ಎಜುಕೇಶನ್ ಪ್ರಾರಂಭ ಮಾಡುವುದಕ್ಕೆ ವ್ಯವಸ್ಥೆ ಮಾಡುತ್ತೀರಾ?

ಶ್ರೀ ಎನ್. ಎಂ. ಕೊಟ್ರಬಸಯ್ಯ ಸೋಗಿ:—ನಾನು ಈಗಾಗಲೇ ಹೇಳಿದ್ದೇನೆ ಕೆಲವು ಕಾಲೇಜುಗಳಲ್ಲಿ ಎಲ್ಲೆಲ್ಲಿ ಸಿವಿಲ್, ಎಲೆಕ್ಟ್ರಿಕಲ್, ಮೆಕ್ಯಾನಿಕಲ್ ಇಂಜಿನಿಯರಿಂಗ್ ಕೋರ್ಸುಗಳು ಇದ್ದವೊ ಅಂಥಾ ಕಡೆಗಳಲ್ಲಿ ಡೈವರ್ಸಿಫಿಕೇಶನ್ ಕೋರ್ಸ್ ಇನ್ ಟೆಕ್ನಿಕಲ್ ಎಜುಕೇಶನ್ ಎಂದರೆ ಆಟೊಮೊಬೈಲ್ ಇಂಜಿನಿಯರಿಂಗ್, ಅಗ್ರಿಕಲ್ಚರಲ್ ಇಂಜಿನಿಯರಿಂಗ್, ಏರ್ ಕಂಡೀಷನ್ ಇವುಗಳನ್ನು ಪ್ರಾರಂಭ ಮಾಡಿದ್ದೇವೆ.

SHORTAGE OF PRIMARY SCHOOL TEACHERS IN DHARWAR DISTRICT.

265. SRI SIDDAYYA KASHIMATH (Shirahatti):—

Will the Minister for Education be pleased to state:—

(*a*) whether it has come to their notice that there is shortage of teachers in the Primary Schools of Dharwar District.

(SRI SIDDAYYA KASHIMATH)

(*b*) if so, the action taken by them to meet the shortage of teachers;

(*c*) whether teachers will be appointed in proportion to the strength of students?

SRI N. M. KOTRABASAIAH SOGI (Deputy Minister for Education):—

(*a*) No.

(*b*) Does not arise.

(*c*) Yes.

ಶ್ರೀ ಸಿದ್ಧಯ್ಯ ಕಾಶೀಮಠ:—ಧಾರವಾಡ ಜಿಲ್ಲೆಯಲ್ಲಿ ! ಹಿಂದೆ ಸ್ಕೂಲ್‌ಬೋರ್ಡ್ ಇದ್ದಾಗ ಸರ್ಕಾರದವರು ಈ ಪ್ರಾಥಮಿಕ ಶಾಲೆಗಳನ್ನು ವಹಿಸಿಕೊಳ್ಳುವುದಕ್ಕಿಂತ ಮುಂಚೆ ಸ್ಕೂಲ್ ಬೋರ್ಡಿನವರು ಎರಡು ಸಾವಿರ ಶಿಕ್ಷಕ ಶಿಕ್ಷಕಿಯರು ಬೇಕು ಎಂದು ಸರ್ಕಾರವನ್ನು ಕೇಳಿದ್ದು ನಿಜವಲ್ಲವೆ?

†ಶ್ರೀ ಎಂ. ಎನ್. ಕೊಟ್ರಬಸವಯ್ಯಸೋಗಿ:—ಈ ಬಗ್ಗೆ ನನ್ನಲ್ಲಿ ಮಾಹಿತಿ ಇಲ್ಲ. ಸದ್ಯದಲ್ಲಿ ಯಾವ ಶಾಲೆಗಳಲ್ಲಿಯೂ ಶಿಕ್ಷಕರ ಕೊರತೆ ಇಲ್ಲ.

ಶ್ರೀ ಸಿದ್ಧಯ್ಯ ಕಾಶೀಮಠ:—ಧಾರವಾಡ ಜಿಲ್ಲೆಯಲ್ಲಿ ಶಿಕ್ಷಕರ ಕೊರತೆ ದೊಡ್ಡದಾಗಿದೆ. ಆದ್ದರಿಂದ ಆಲ್ಲಿಗೆ ಸಾಕಷ್ಟು ಶಿಕ್ಷಕರನ್ನು ನೇಮಿಸುವುದಕ್ಕೆ ಆದೇಶವನ್ನು ಕೊಡುತ್ತೀರಾ?

ಶ್ರೀ ಎನ್. ಎಂ. ಕೊಟ್ರಬಸವಯ್ಯ ಸೋಗಿ;—ಯಾವ ಜಿಲ್ಲೆಯಲ್ಲಿಯೂ ಶಿಕ್ಷಕರ ಅಭಾವ ಇರುವುದು ವರದಿ ಬಂದಿಲ್ಲ. ನಿರ್ದಿಷ್ಟವಾದ ಉದಾಹರಣೆಗಳನ್ನು ಹೇಳಿದರೆ ಕೂಡಲೇ ಕ್ರಮ ತೆಗೆದುಕೊಳ್ಳುತ್ತೇವೆ.

ಶ್ರೀ ಮಹದೇವ್ ಬಣಕಾರ್:—ಧಾರವಾಡ ಜಿಲ್ಲೆಯಲ್ಲಿ ಸ್ಕೂಲ್‌ಬೋರ್ಡ್ ಅನ್ನು ರದ್ದುಮಾಡಿ ಪ್ರಾಥಮಿಕ ಶಾಲೆಗಳನ್ನು ಸರ್ಕಾರದವರು ತೆಗೆದುಕೊಳ್ಳುವುದಕ್ಕೆ ಪೂರ್ವಭಾವಿಯಾಗಿ ಅಲ್ಲಿ ಎರಡುವರೆ ಸಾವಿರ ಶಿಕ್ಷಕ ಶಿಕ್ಷಕಿಯರ ಅಭಾವ ಇದೆ ಎಂದು ತಿಳುವಳಿಕೆ ಕೊಟ್ಟಿರತಕ್ಕದ್ದು ಸರ್ಕಾರದ ಗಮನಕ್ಕೆ ಬಂದಿದೆಯೇ ಮತ್ತು ಆ ಬಗ್ಗೆ ಏನುಕ್ರಮ ತೆಗೆದುಕೊಂಡಿದ್ದೀರಿ

ಶ್ರೀ ಎನ್. ಎಂ. ಕೊಟ್ರಬಸವಯ್ಯಸೋಗಿ:—ಅಲ್ಲಿ ಶಿಕ್ಷಕರ ಅಭಾವ ಇದೆಯೆಂದು ಸರ್ಕಾರಕ್ಕೆ ವರದಿ ಬಂದಿಲ್ಲ.

ಶ್ರೀ ಎಸ್. ಬಂಗಾರಪ್ಪ:— (ಇ) ಪ್ರಶ್ನೆಗೆ ಉತ್ತರವಾಗಿ ಶಿಕ್ಷಕರನ್ನು ಹುಡುಗರ ಸಂಖ್ಯೆಯ ಪ್ರಮಾಣದ ಮೇಲೆ ನೇಮಿಸಲಾಗುತ್ತದೆ ಎಂದು ತಾವು ಹೇಳಿದ್ದೀರಿ, ಹಾಗಾದರೆ ನಮ್ಮ ಶಿವಮೊಗ್ಗ ಜಿಲ್ಲೆಯಲ್ಲಿ ಶಾಲೆಗಳಲ್ಲಿ ಹುಡುಗರ ಸಂಖ್ಯೆಯ ಆಧಾರದ ಮೇಲೆ ಶಿಕ್ಷಕರನ್ನು ನೇಮಕ ಮಾಡುತ್ತಿಲ್ಲ. ಆದ್ದರಿಂದ ಸರ್ಕಾರದವರು ಯೋಚನೆ ಮಾಡಿ ಎಲ್ಲಾ ಜಿಲ್ಲೆಗಳಲ್ಲಿಯೂ ಕೂಡ ಹುಡುಗರ ಸಂಖ್ಯೆಯ ಮೇಲೆ ಶಿಕ್ಷಕರನ್ನು ನೇಮಕ ಮಾಡುವುದಕ್ಕೆ ಪ್ರಯತ್ನ ಮಾಡುತ್ತೀರಾ

ಶ್ರೀ ಎನ್. ಎಂ. ಕೊಟ್ರಬಸವಯ್ಯ ಸೋಗಿ;—ಅವಶ್ಯ ಇರುವ ಕಡೆಗಳಲ್ಲಿ ನೇಮಕ ಮಾಡುತ್ತೇವೆ ಪ್ರತಿವರ್ಷವೂ ಡಿ. ಎಲ್. ಆರ್ ಸಿ. ಯವರು ಹೊಸದಾಗಿ ಶಿಕ್ಷಕರನ್ನು ನೇಮಕ ಮಾಡುತ್ತಾರೆ.

ಶ್ರೀ ಕೆ. ಎನ್. ವೀರಪ್ಪಗೌಡ;—ಮಾನ್ಯ ಮಂತ್ರಿಗಳು ಎಲ್ಲೂ ಶಿಕ್ಷಕರ ಕೊರತೆ ಇಲ್ಲ ಎಂದು ಹೇಳಿದರು. ನನ್ನ ಕ್ಷೇತ್ರವಾದ ಬೆಸ್ತೂರು, ನರಸಿಂಹರಾಜಪುರ, ಮುದಗೂರು ಈ ಸ್ಥಳಗಳಲ್ಲಿರತಕ್ಕ ಶಾಲೆಗಳಲ್ಲಿ ಮೂರು ಜನ ಉಪಾಧ್ಯಾಯರು ಇರುವುದಕ್ಕೆ ಬದಲಾಗಿ ಒಬೊಬ್ಬ ಉಪಾಧ್ಯಾಯರೇ ಇದ್ದಾರೆ. ಈ ಬಗ್ಗೆ ವಿದ್ಯಾ ಇಲಾಖೆಗೆ ಕಾಗದವನ್ನು ಕೂಡ ಬರೆದಿದ್ದೇವೆ ಆದ್ದರಿಂದ ಆ ಸ್ಥಳಗಳಿಗೆ ಜಾಗ್ರತೆಯಾಗಿ ಉಪಾಧ್ಯಾಯರನ್ನು ನೇಮಕ ಮಾಡುವುದಕ್ಕೆ ಪ್ರಯತ್ನ ಮಾಡುತ್ತೀರಾ

ಶ್ರೀ ಎನ್. ಎಂ, ಕೊಟ್ರಬಸವಯ್ಯ ಸೋಗಿ:—ಚಿಕ್ಕಮಗಳೂರು ಜಿಲ್ಲೆಯಲ್ಲಿ ಡಿ. ಎಲ್. ಆರ್. ಸಿ. ಯವರು ಉಪಾಧ್ಯಾಯರನ್ನು ನೇಮಕ ಮಾಡಿದ್ದಾರೆ. ಸರ್ಕಾರದವರು ಪ್ರತಿವರ್ಷ ಉಪಾಧ್ಯಾಯರನ್ನು ಟ್ರೈನಿಂಗಿಗೆ ಡೆಪ್ಯೂಟ್ ಮಾಡುತ್ತಾರೆ. ಅಂಥವರ ಜಾಗದಲ್ಲಿ ಜೆಂಪರರಿಯಾಗಿ ಉಪಾಧ್ಯಾಯರನ್ನು ನೇಮಕ ಮಾಡಿ ಶಾಲಾ ಕೆಲಸಗಳು ಸಫರ್ ಆಗದಂತೆ ಸರ್ಕಾರದವರು ನೋಡಿಕೊಳ್ಳುತಿದ್ದಾರೆ.

ಶ್ರೀ ಸದಾಶಿವಪ್ಪಪಾಟೀಲ್:—ಎಷ್ಟೋಕಡೆ ಟ್ರೇನಿಂಗ್ ವೇಕೆನ್ಸಿಗಳು ಭರ್ತಿ ಆಗದೆ ಹಾಗೆ ಖಾಲಿಇವೆ ಅಂಥಾ ವೇಕೆನ್ಸಿಗಳನ್ನು ಆದಷ್ಟು ತೀವ್ರವಾಗಿ ಭರ್ತಿ ಮಾಡುವುದಕ್ಕೆ ಸರ್ಕಾರದವರು ಕ್ರಮ ತೆಗೆದು ಕೊಳ್ಳುತ್ತಿರಾ? ಅಥವಾ ಲೋಕಲ್ ಕ್ಯಾಂಡಿಡೇಟ್‌ಗಳನ್ನು ನೇಮಕ ಮಾಡಲು ಆದೇಶ ಕೊಡುತ್ತೀರಾ

ಶ್ರೀ ಎನ್. ಎಂ. ಕೊಟ್ರಬಸವಯ್ಯ ಸೋಗಿ:— ಲೋಕಲ್ ಕ್ಯಾಂಡಿಡೇಟ್‌ಗಳನ್ನು ನೇಮಕ ಮಾಡಬಾರದು ಎಂಬುದು ಸರ್ಕಾರದ ಸಾರ್ವತ್ರಿಕ ನೀತಿಯಾಗಿದೆ. ಡಿ. ಎಲ್, ಆರ್. ಸಿ. ಯವರು ಈ ಬಗ್ಗೆ ವಿಚಾರಮಾಡಿ ಉಪಾಧ್ಯಾಯರನ್ನು ನೇಮಕ ಮಾಡುತ್ತಾರೆ.

ಶ್ರೀ ಎಂ. ಎನ್. ರಾಮಣ್ಣ ;—ತುಮಕೂರುಜಿಲ್ಲೆಯಲ್ಲಿ ಸುಮಾರು ೫೦೦ ಜನ ಶಿಕ್ಷಕರಿಲ್ಲ ಎಂದು ಮೂರು ವರ್ಷಗಳಿಂದಲೂ ಹೇಳುತ್ತಿದ್ದೇವೆ ಅದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಶ್ರೀ ಎನ್. ಎಂ. ಕೊಟ್ರಬಸವಯ್ಯ ಸೋಗಿ:—ಅದು ಸರ್ಕಾರದ ಗಮನಕ್ಕೆ ಬಂದಿಲ್ಲ,

ಶ್ರೀ ಕೆ. ಹೆಚ್. ಪಾಟೀಲ್:—ತಿಳಿ ಹುಡುಗರಿಗೆ ಒಬ್ಬರು ಉಪಧ್ಯಾಯರು ಇರಬೇಕೆಂದು ನಿಯಮ ಇದ್ದರೂ ಕೂಡ ಇದು ಧಾರವಾಡ ಜಿಲ್ಲೆಯಲ್ಲಿ ಬಹುಸಂಖ್ಯಾತ ಶಾಲೆಗಳಲ್ಲಿ ಪೂರ್ಣವಾಗಿಲ್ಲ. ಗದಗನಲ್ಲಿ ಅನೇಕ ಶಾಲೆಗಳಲ್ಲಿ ಹುಡುಗರ ಸಂಖ್ಯೆಯ ಪ್ರಮಾಣಕ್ಕನುಗುಣವಾಗಿ ಶಿಕ್ಷಕರು ಇಲ್ಲ ಎಂದು ನಾನು ಬರೆದಿದ್ದೇನೆ ಅದು ತಮ್ಮ ಗಮನಕ್ಕೆ ಬಂದಿದೆಯೇ ಅದು ಏನಾಗಿದೆ ಎಂಬುದನ್ನು ಹೇಳುತ್ತಿರಾ?

ಶ್ರೀ ಎನ್. ಎಂ. ಕೊಟ್ರಬಸವಯ್ಯ ಸೋಗಿ: —ಈ ಬಗ್ಗೆ ನನ್ನ ಹತ್ತಿರ ಮಾಹಿತಿ ಇಲ್ಲ.

ಶ್ರೀ ಸಿ. ಎಂ. ಎಸ್. ಶಾಸ್ತ್ರಿ:—ಚಿಕ್ಕಮಗಳೂರು ಜಿಲ್ಲೆಯಲ್ಲಿರತಕ್ಕ ಅನೇಕ ಸ್ಕೂಲುಗಳಲ್ಲಿ ಉಪಾಧ್ಯಾಯರುಗಳು ಇಲ್ಲ. ಎಷ್ಟು ಸ್ಕೂಲುಗಳಲ್ಲಿ ಉಪಧ್ಯಾಯರು ಇಲ್ಲ ಎನ್ನತಕ್ಕ ಸಂಖ್ಯೆಯನ್ನು ಕೊಟ್ಟರೆ ಅಲ್ಲಿ ಕೂಡಲೇ ಉಪಾಧ್ಯಾಯರನ್ನು ನೇಮಕ ಮಾಡುತ್ತೀರಾ?

ಶ್ರೀ ಎನ್. ಎಂ. ಕೊಟ್ರಬಸವಯ್ಯ ಸೋಗಿ:—ಮಾನ್ಯ ಸದಸ್ಯರು ನಿರ್ದಿಷ್ಟವಾದ ಉದಾಹರಣೆ ಗಳನ್ನು ಕೊಟ್ಟರೆ ಸಾಧ್ಯವಾದಷ್ಟು ತೀವ್ರವಾಗಿ ಉಪಾಧ್ಯಾಯರನ್ನು ನೇಮಕ ಮಾಡುವುದಕ್ಕೆ ಪ್ರಯತ್ನ ಮಾಡುತ್ತೇವೆ,

Mr. SPEAKER :—Question time is over. Now held over Question No. 207 by Sri M. S. Krishnan.

Sri H. SIDDAVEERAPPA :—Mr. Speaker Sir, I want to make a representation. Yesterday many questions were held over because the concerned Ministers were not present. For instance the Chief Minister was not present yesterday. The Chair said that those questions will be held over until tomorrow. Have those questions lapsed ?

Mr. SPEAKER :—No, if the Chair has stated that they will be taken up.

Sri H. SIDDAVEERAPPA :—The Chair has specifically said that.

Mr. SPEAKER :—That will be taken up.

In the Lok Sabha 70 to 80 questions are put up for a day but hardly 4 or 5 are answered. The others go on record. In the House of Commons also though 200 questions are put up for a day but hardly 30 or 40 are answered. Others go on record. If the Hon. Members desire that all questions included in the list should be answered on the floor of the House, that could be done only if the members co-operate with the Chair.

Sri S. S. ARAKERI :—I walk out against the refusal of the Chair to permit me to put my question.

GOVERNMENT OF INDIA'S CIRCULAR ON COMMUNAL MENACE IN THE COUNTRY

207 Sri M. S. KRISHNAN (Malleswaram)[*]:—

Will the Chief Minister be pleased to state :—

(*a*) whether any circular/directive advice has been issued by the Government of India to the Government of Mysore in respect of the communal menace that is threatening the country ;

(*b*) If so, the salient features of such circular/directive/advice (a copy of such circular/directive/advice be placed on the table of the House) ;

(*c*) The steps the Government is contemplating to take in regard to the implementation of the circular/directive advice ?

Sri VEERENDRA PATIL (Chief Minister) :—

(*a*) Yes.

(*b*) They contain general instructions r garding removal of causes for communal tensions and disturbances, maintenance of communal harmony, preventive and remedial measures to be taken, public co-operation to be enlisted etc. Copies of these circulars and instructions cannot be placed on the table of the House.

(*c*) Government have been taking and will continue to take all necessary steps in this regard.

ಶ್ರೀ ಎಂ. ಎಸ್. ಕೃಷ್ಣನ್ :—(ಅ) ಪ್ರಶ್ನೆಗೆ ಉತ್ತರವಾಗಿ ಸುತ್ತೋಲೆ ಹಾಗೂ ತಿಳಿವಳಿಕೆಗಳ ಪ್ರತಿಗಳನ್ನು ಸಭೆಯ ಮುಂದೆ ಇಡಲು ಸಾಧ್ಯವಿಲ್ಲ ಎಂದು ಹೇಳಿದ್ದೀರಿ. ಆ ರೀತಿ ಸಭೆಯ ಮುಂದೆ ಇಡದಿರುವುದಕ್ಕೆ ಗಾಢವಾದ ಕಾರಣವೇನು?